

ಅಂತ ಕರೆದನಲ್ಲ ಎಂದು. ಅಂದರೆ ಹೆಸರು ಬದಲಿಸಿಲ್ಲ. ಅಥವಾ ಅಲ್ಲಿ ಹೋದಾಗ ಹೀಗೇ ಕರೀಬೇಕು ಅಂತ ಹೇಳಿದ್ದಾಳೆಯೋ ಏನೋ. ಇರಲಿಕ್ಕಿಲ್ಲ, ಸಹಜವಾಗಿ, ಉರ್ದುವಿನ ಆಕ್ಸೆಂಟು ತಿಲಮಾತ್ರವೂ ಇಲ್ಲದ ಸ್ಪಷ್ಟ ಕನ್ನಡ... 'ಹೌದಲ್ಲ, ಮರ್ತೆಬಿಟ್ಟಿದ್ದೆ' ಎನ್ನುತ್ತ ಚೀಲದ ಜಿಪ್ ತೆರೆದಳು ರೋಹಿಣಿ. ಭಟ್ಟರ ಕೈಯಲ್ಲಿದ್ದ ಮಗುವಿಗೆ ಪೂರ್ಣ ಎಚ್ಚರವಾಗಿ ಕೊಸರುತ್ತ ಅಳುಮುಖ ಮಾಡತೊಡಗಿತು. 'ಹೊಸಬರಲ್ಲವಾ ಅದಕ್ಕೆ ಹೆದರಿರಬೇಕು' ಎನ್ನುತ್ತ ಆತ ಮಗುವನ್ನ ಎತ್ತಿಕೊಂಡ. ಅಡಿಗೆಗೆ ಏನಾದರೂ ಸಹಾಯ ಬೇಕೆ ಎಂದು ಕೇಳಬೇಕೆಂದುಕೊಂಡ ರೋಹಿಣಿ ಅಡಿಗೆ ಮನೆಯ ಬಾಗಿಲವರೆಗೆ ಹೋದವಳು ಹೊಸಿಲು ದಾಟಲು ಹಿಂಜರಿದಳು. ಅಮ್ಮನೇ ಹೇಳದೆ ಒಳಹೋಗುವುದು ಅಪಚಾರ ಅನ್ನಿಸಿತು. ಇವಳನ್ನ ಕಂಡ ಗೀತಾ, 'ಬನ್ನಿ ಅತ್ತಿಗೆ, ಏನು ಬೇಕಾಗಿತ್ತು, ಪಾಪುವಿಗೆ ಹಾಲು ಕಾಯಿಸಲು ಇಟ್ಟಿದ್ದೇನೆ, ತಣಿಯುತ್ತಲೆ ಕೊಡುತ್ತೇನೆ' ಎಂದಳು. 'ಸ್ವಲ್ಪ ಕುಡಿಯಲು ನೀರು ಬೇಕಿತ್ತತ್ತಿಗೆ' ಎನ್ನುತ್ತ ಹಾಗೇ ನೀರುಕುಡಿದು ಮರಳಿ ಬಂದು ಮಗನನ್ನ ಮಾತಾಡಿಸಲು ಆರಂಭಿಸಿದಳು.

★★★

ಊಟಕ್ಕೆ ಕುಳಿತಾಗ ರೋಹಿಣಿ ಹೇಳಿದಳು – 'ನಿನಗೆ ಗೊತ್ತಾ ಅಮ್ಮ, ಮದುವೆಯಾದಲ್ಲಿಂದ ಇವರು ಮಾಂಸ ತಿನ್ನುವುದನ್ನು ಪೂರಾ ಬಿಟ್ಟುಬಿಟ್ಟಿದ್ದಾರೆ. ಮಾತ್ರವಲ್ಲ, ನೀನು ಹೇಳಿಕೊಟ್ಟ ತಂಬುಳಿ ಗೊಜ್ಜು ಇಂಥಾದ್ದನ್ನೇ ನಾನು ಮಾಡುವುದು ಮತ್ತು ಅವರಿಗೆ ಅದೇ ಇಷ್ಟ.' ಭಟ್ಟರು ನಕ್ಕಂತೆ ಮಾಡಿದರು. ಅದೇನೇ ಇದ್ದರೂ ಹೀಗೆ ಬೇರೆ ಜಾತಿಯವನೊಟ್ಟಿಗೆ ಓಡಿ ಹೋಗುವ ಅಗತ್ಯವಿತ್ತಾ? ಅಪ್ಪ ಅಮ್ಮ ಯಾರೂ ಇಷ್ಟರವರೆಗೆ ನೆನಪಾಗದವರು ಈಗ ಏಕೆ ಆದರೊ? ಏನಾದರೂ ತೊಂದರೆ ಬಂತೆ? ಹಾಗನ್ನಿಸುವುದಿಲ್ಲ... ಸುಖವಾಗಿಯೇ ಇದ್ದಂತಿದೆ... ಎಲ್ಲಾ ಕಾಲ ಮಹಿಮೆಯೆ... ಅವರ ಯೋಚನಾ ಲಹರಿ ಹೀಗೆ ಸಾಗುತ್ತಿದ್ದರೆ ನಿಧಾನಕ್ಕೆ ಹತ್ತಿರವಾಗುತ್ತಿದ್ದ ತಾಯಿ ಮಗಳು, ಅಡುಗೆ ಎಲ್ಲಾ ಕಲಿತೆಯ.. ಬಾಣಂತನವನ್ನ ಹೇಗೆ ಮಾಡಿಕೊಂಡೆ ಇಂಥಾ ಮಾತುಗಳಲ್ಲಿ ನಿರತರಾಗಿದ್ದರು. ಮಧ್ಯೆ ಮಧ್ಯೆ, ತಲೆ ತಗ್ಗಿಸಿಕೊಂಡು ಊಟ ಮಾಡುತ್ತಿದ್ದ ರಫೀಕನಿಗೆ ಒತ್ತಾಯ ಮಾಡುತ್ತ ಬಡಿಸುತ್ತಿದ್ದಳು ರುಕ್ಮಿಣಿ. ಇದನ್ನೆಲ್ಲ ಕಂಡಾಗ, ಪಾಪ ಮಗಳು ದೂರವಾದ ಬಳಿಕ ರುಕ್ಮಿಣಿ ತಮ್ಮೆಲ್ಲರಿಗಿಂತ ಹೆಚ್ಚು